ಕ್ರಿಮಿನಲ್ ಮಿಸ್ ನಂಃ 2252/2022 ಪಿ.ಡಬ್ಲ್ಯೂಃ1-ಶಿವಲೀಲಾ ಬಸವರಾಜ ಗೋಲಪ್ಪನವರ

<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 17-01-2026 ರಂದು ಪ್ರಮಾಣೀಕರಿಸಲಾಯಿತು.</u>

**<u>ಪಾಟೀ ಸವಾಲುಃ ಶ್ರೀ ಜಿ.ವಿ.ಪಿ. ಎದುರುದಾರರ ಪರ ವಕೀಲರಿಂದಃ</u>**

ನಾನು ಮತ್ತು ಎದುರುದಾರ ಸುಮಾರು 10 ವರ್ಷಗಳ ಕಾಲ ದಾಂಪತ್ಯ ಜೀವನ ಮಾಡಿದ್ದೇವೆ. ನಮಗೆ ಸನ್ನದಿ ಎಂದು ಹೆಣ್ಣು ಮಗು ಜನಿಸಿದೆ ಎಂದರೆ ಸರಿ. ನಾನು ಈಗ ಬಾದಾಮಿ ತಾಲೂಕಿನ ಬೇಲೂರಿನಲ್ಲಿ ಶಾಲಾ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಮೊದಲು ಜಮಖಂಡಿಯಲ್ಲಿ ನೌಕರಿ ಮಾಡಿದ್ದು, ನನಗೆ ನೌಕರಿ ಆದ ಮೇಲೆ ಮದುವೆ ಆಗಿರುತ್ತದೆ. ಮದುವೆ ನಂತರ ನನ್ನ ಗಂಡ ಬಾದಾಮಿ ತಾಲೂಕು ಗುಳೇದಗುಡ್ಡದಲ್ಲಿ ಕೆಲಸ ಮಾಡುತ್ತಿದ್ದರು. ಅವರು ವಾರಕ್ಕೊಮ್ಮೆ ಬರುವುದು ಹೋಗುವುದು ಮಾಡುತ್ತಿದ್ದರು ಎಂದರೆ ಸರಿ. ರಜೆ ದಿನಗಳಲ್ಲಿ ನಾನು ಎದುರುದಾರನ ಹತ್ತಿರ ಬರದೇ ನನ್ನ ತವರು ಮನೆಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಎದುರುದಾರನ ಮನೆಯಲ್ಲಿ ಆತನ ತಾಯಿ ಇರುತ್ತಿದ್ದರು ಎಂದರೆ ಸಾಕ್ಷಿಯು ಅವರ ತಾಯಿ, ತಂದೆ ಮತ್ತು ತಮ್ಮ ಇರುತ್ತಿದ್ದರು ಎಂದು ನುಡಿಯುತ್ತಾರೆ. ಎದುರುದಾರನ ತಾಯಿಯ ಜೊತೆ ನಾನು ಆಗಾಗ ಜಗಳ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಎದುರುದಾರನ ಜೊತೆ ನಾನೇ ಜಗಳ ಮಾಡಿ ಹೇಳದೇ ಕೇಳದೆ ನನ್ನ ತವರು ಮನೆಗೆ ಹೋಗಿದ್ದೇನೆ ಎಂದರೆ ಸರಿಯಲ್ಲ. ನಾನು ಜಗಳ ಮಾಡಿ ಹೋದರು ಸಹ ಎದುರುದಾರ ಹಿರಿಯರನ್ನು ಕರೆದುಕೊಂಡು ನನ್ನನ್ನು ಕರೆಯಲು ಬಂದಾಗ ಅವರಿಗೆ ನಾನು ಮರ್ಯಾದೆ ಕೊಡಲಿಲ್ಲ ಎಂದರೆ ಸರಿಯಲ್ಲ. ಹಿರಿಯರಿಗೆ ನಾನು ಎದುರುದಾರನ ಜೊತೆ ಹೇಗೆ ಬಾಳ್ವೆ ಮಾಡಬೇಕು ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನ ನೆರಳು ಮಗಳಿಗೆ ಬೀಳಬಾರದು ಎಂದು ಇವತ್ತಿನವರಗೂ ಎದುರುದಾರನಿಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ನಾನು ನನ್ನ ಮಗಳನ್ನು ಬೆಂಗಳೂರಿನಲ್ಲಿ ಶಾಲೆಗೆ ಹಚ್ಚಿದ್ದೇನೆ ಎಂದರೆ ಸರಿಯಲ್ಲ. ನನ್ನ ವರ್ತನೆಯಿಂದ ಮಾನಸಿಕವಾಗಿ ನೊಂದು ದಿಃ07-12-2018 ರಂದು ಎದುರುದಾರನ ತಂದೆ ತೀರಿಕೊಂಡರು ಎಂದರೆ ಸರಿಯಲ್ಲ. ಬಾದಾಮಿಯ ಮಾನ್ಯ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಎಮ್.ಸಿ ನಂ.18/2019 ಅನ್ನು ದಾಂಪತ್ಯ ಜೀವನಬದ ಪುನರ್ ಸ್ಥಾಪನೆಗಾಗಿ ನಾನು ಸಲ್ಲಿಸಿದ್ದೆ ಎಂದರೆ ಸಾಕ್ಷಿಯು ಎದುರುದಾರ ಸಲ್ಲಿಸಿದ್ದ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನಾವು ಇಬ್ಬರು ರಾಜೀ ಮಾಡಿಕೊಂಡೇವು ಎಂದರೆ ಸರಿ. ನಂತರ 2-3 ವರ್ಷ ನಾನು ಮತ್ತು ಎದುರುದಾರ ಜೊತೆಗೆ

ಇದ್ದೇವು. ನಾನು ನಂತರದಲ್ಲಿ ಮತ್ತೇ ಎದುರುದಾರನೊಂದಿಗೆ ಜಗಳ ಮಾಡಿ ನನ್ನ ತವರು ಮನೆಗೆ ಹೋದೆ ಎಂದರೆ ಸರಿಯಲ್ಲ. ಎದುರುದಾರ ತನ್ನ ಹೆಸರಿನಲ್ಲಿ ಲೋನ್ ಮಾಡಿಸಿ ನನ್ನ ಹೆಸರಿನಲ್ಲಿ  ಹುನಗುಂದದಲ್ಲಿ 356/ಬ/1 ಪ್ಲಾಟ್ ನಂ.20 ಅನ್ನು ಖರೀದಿ ಮಾಡಿದ್ದಾನೆ ಎಂದರೆ ಸರಿಯಲ್ಲ.  ಸಾಕ್ಷಿಯು ಮುಂದುವರೆದು ನನ್ನ ತಂದೆ ತಾಯಿ ಹಣ ಕೋಟ್ಟಿರುತ್ತಾರೆ. ಶಿವಪ್ಪ ತಂದೆ ಬೈಲಪ್ಪ ಹಳೆ ಹೋನಪ್ಪನವರ ನನ್ನ ತಂದೆ ಹೆಸರಿನಲ್ಲಿ ರಿ.ಸ. ನಂ.154/4 ಮತ್ತು 238/5 , 540/4 ನೇದ್ದರ ಆಸ್ತಿಗಳು ನನ್ನ ತಂದೆಯ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ನನ್ನ ತಂದೆಗೆ ಒಟ್ಟು 16 ಎಕರೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನು ನನ್ನ ಪ್ರಮಾಣ ಪತ್ರದಲ್ಲಿ ತೋರಿಸಿಲ್ಲ  ಎಂದರೆ ಸಾಕ್ಷಿಯು ಅವು ನನ್ನ ಆಸ್ತಿಯಲ್ಲ ಎಂದು ನುಡಿಯುತ್ತಾರೆ. ಸದರಿ ಪ್ಲಾಟ್ ಅನ್ನು ಸಹ ನನ್ನ ಪ್ರಮಾಣ ಪತ್ರದಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ರಿ.ಸ. ನಂ.154/4 ಮತ್ತು 238/5 , 540/4 ನೇದ್ದರ ಪಹಣಿ ಪತ್ರಿಕೆಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿ.ಆರ್ 1 ರಿಂದ 3 ಎಂದು ಗುರುತಿಸಲಾಗಿದೆ. ಈ ಪ್ರಕರಣದಲ್ಲಿಯ ಮಧ್ಯಂತರ ಆದೇಶದ ಪ್ರಕಾರ ನನ್ನ ಖಾತೆಗೆ ಪ್ರತಿ ತಿಂಗಳು ರೂ.5000/- ಜಮೆ ಆಗುತ್ತದೆ ಎಂದರೆ ಸರಿ. ನನ್ನ ಮಗಳ ಹೆಸರಿನಲ್ಲಿ ಅಂಚೆ ಇಲಾಖೆಯಲ್ಲಿ ಸುಖನ್ಯ ಸಮೃದ್ದಿ ಅಡಿಯಲ್ಲಿ ಪ್ರತಿ ತಿಂಗಳು ಎದುರುದಾರ ರೂ.5000/- ಗಳನ್ನು ತುಂಬುತ್ತಾನೆ ಎಂದರೆ ಸರಿಯಲ್ಲ. ಪ್ರತಿ ತಿಂಗಳು ಸದರಿ ಮೊತ್ತವನ್ನು ಎದುರುದಾರ ತುಂಬಿದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ09-01-2022 ರಂದು ನನ್ನನ್ನು ಹೊಡಿಬಡಿ ಮಾಡಿ ಮನೆಯಿಂದ ಎದುರುದಾರ ಹೊರಹಾಕಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರ ನನ್ನ ಮಗಳಿಗೆ  ಯಾವುದೇ ರೀತಿಯಿಂದ ವಿಧ್ಯಾಭ್ಯಾಸಕ್ಕೆ, ಔಷದೋಪಚಾರ ಇನ್ನಿತರ ವೆಚ್ಚಗಳನ್ನು ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನಿಗೆ ರೂ.70000/- ತಿಂಗಳ ಸಂಬಳ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನಿಗೆ 5 ಎಕರೆ ಜಮೀನು ಇದ್ದು ವರ್ಷಕ್ಕೆ ರೂ. 4 ಲಕ್ಷ ನಿವ್ವಳ ಉತ್ಪನ್ನ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೇ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಬೆಂಗಳೂರಿನ ಶಾಲೆಯಲ್ಲಿ ವರ್ಷಕ್ಕೆ ಒಂದು ಲಕ್ಷದ 32 ಸಾವಿರದ 260 ರೂಪಾಯಿ ಫೀ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವರ್ಷಕ್ಕೆ ನನ್ನ ಮಗಳಿಗೆ ರೂ.50 ಸಾವಿರ ಖರ್ಚು ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾನ್ಯ ನ್ಯಾಯಾಲಯಕ್ಕೆ ನನ್ನ ಮಗಳನ್ನು ಒಂದು ದಿನವೂ ಕರೆದುಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ನಾನು ಶಾಲೆ ಅಧಿಕಾರಿಗಳ ಜೊತೆ ಮಿಲಾಪೆಯಾಗಿ ಕೊಟ್ಟಿ ರಶೀದಿಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

2. ಎದುರುದಾರ ಪ್ಲಾಟ್ ನ ಸಂಬಂಧ ಎಸ್.ಬಿ.ಐ ಗುಳೇದಗುಡ್ಡ ಬ್ಯಾಂಕ್ನಲ್ಲಿ ರೂ. 12 ಲಕ್ಷ ಸಾಲ ಮಾಡಿದ್ದಾನೆ ಎಂದರೆ ಸರಿಯಲ್ಲ. ಎದುರುದಾರನ ಸಂಬಳದಲ್ಲಿ ಪ್ರತಿ ತಿಂಗಳು ರೂ. 23,243/- ಹಣ ಸಾಲದ ರೂಪದಲ್ಲಿ ಕಟ್ಟಾಗುತ್ತದೆ ಎಂದರೆ ಸರಿಯಲ್ಲ. ಇನ್ನುಳಿದ ಸಂಬಳದಲ್ಲಿ ಅವರ ತಾಯಿಯ ಔಷದೋಪಚಾರಕ್ಕೆ ಮತ್ತು ಮನೆ ಬಾಡಿಗೆಗಾಗಿ ಸಾಕಾಗುತ್ತದೆ ಎಂದರೆ ಸಾಕ್ಷಿಯು ಅವರ ತಾಯಿಗೆ ಪಿಂಚಣಿ ಬರುತ್ತದೆ , ಅವರಿಗೆ ಸ್ವಂತ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಪ್ರತಿ ತಿಂಗಳು 60 ರಿಂದ 65 ಸಾವಿರ ಸಂಬಳ ತೆಗೆದುಕೊಳ್ಳುತ್ತೇನೆ ಎಂದರೆ ಸಾಕ್ಷಿಯು ಲೋನ್ ಇರುತ್ತದೆ, ಮಗಳ ಶಿಕ್ಷಣಕ್ಕಾಗಿ ಲೋನ್ ತೆಗೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಲೋನ್ ಕುರಿತು ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿಲ್ಲ. ಸಾಕ್ಷಿಯು ಮುಂದುವರೆದು ನಾನು ಮುಂದೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನನ್ನ ಅಣ್ಣತಮ್ಮಂದಿರ ಮಾತು ಕೇಳಿ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಇವತ್ತಿನವರಗೊ ಎದುರುದಾರ ನನ್ನನ್ನು ಕರೆದುಕೊಂಡು ಜೀವನ ನಡೆಸಲು ತಯಾರು ಇದ್ದಾರೆ ಎಂದರೆ ಸರಿಯಲ್ಲ. ಎದುರುದಾರ ಯಾವುದೇ ತಪ್ಪು ಮಾಡದಿದ್ದರೂ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ.

(ಹುಲುಗಪ್ಪ ಡಿ)
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.